ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ. 182-2010

.......................... ವಿರುದ್ಧ ..........................

PW 3
CW 7

ಸಾಕ್ಷಿ ಹೆಸರು : ಮುರಳಿಕೃಷ್ಣ ರೆಡ್ಡಿ
ತಂದೆ ಹೆಸರು : ಬಾಳಕೃಷ್ಣ ರೆಡ್ಡಿ
ವಯಸ್ಸು : 25 ವರ್ಷ
ಉದ್ಯೋಗ : ಗೌಂಡಿ ಕೆಲಸ
ವಾಸಸ್ಥಳ : ಯಶವಂತಪುರ.ಬೆಂಗಳೂರ

ದಿನಾಂಕಃ 17-02-2018 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ಆರೋಪಿಯನ್ನು ನೋಡಿರುತ್ತೇನೆ. ಸುಮಾರು 8 ವರ್ಷಗಳ ಹಿಂದೆ ನಾನು ರಾಮನಗರದಲ್ಲಿ ರಸ್ತೆ ಮಾಡುವ ಕೆಲಸಕ್ಕೆ ಬಂದಾಗ ಕಟ್ಟಡದ ಕೆಲಸದ ಸಾಮಾಗ್ರಿಗಳು ಇದ್ದವು. ಬೆಳಿಗ್ಗೆ 5-00 ಗಂಟೆ ಸುಮಾರಿಗೆ ಟಪ್ಪರ್ ಲಾರಿ ಸಂಖ್ಯೆ ನನಗೆ ನೆನಪಿಲ್ಲ ಅದು ಜಾಗೆಯಲ್ಲಿ ಇಲ್ಲದ ಬಗ್ಗೆ ಲಾರಿಯ ಚಾಲಕನು ನಮಗೆ ತಿಳಿಸಿರುತ್ತಾನೆ. ಆಗ ನಾವು ಎಲ್ಲರೂ ಕೂಡಿ ಹುಡಕಿದೆವು ಆದರೆ ಲಾರಿಯು ಪತ್ತೆಯಾಗಿರುವುದಿಲ್ಲ, ತದನಂತರ ಚಾಸಾ 1 ರವರು ಈ ಬಗ್ಗೆ ಪಿರ್ಯಾದನ್ನು ನೀಡಿರುತ್ತಾರೆ. ನಾನು ಈ ರೀತಿ ಹೇಳಿಕೆಯನ್ನು ನೀಡಿರುವುದಿಲ್ಲ, ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಮರು ಹೇಳಿಕೆಯನ್ನು ಕೊಟ್ಟಿಲ್ಲ.

(ಈ ಹಂತದಲ್ಲಿ ಎ.ಪಿ.ಪಿ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u> ಎ.ಪಿ.ಪಿ. ರವರಿಂದ.

ದಿಃ 13-12-2009 ರಂದು ರಾತ್ರಿ 8-00 ಕ್ಕೆ ನಮ್ಮ ಆರು ಟಿಪ್ಪರಗಳನ್ನು ನಮ್ಮ ಶೇಡನ ಮುಂದುಗಡೆ ಅವುಗಳ ಚಾಲಕರು ನಿಲ್ಲಿಸಿಟ್ಟಿದ್ದರು. ರಾತ್ರಿ ಊಟ ಮಾಡಿಕೊಂಡು 10-00 ಗಂಟೆಗೆ ಟಪ್ಪರ ಚಾಲಕರು ತಮ್ಮ ತಮ್ಮ ಟಿಪ್ಪರಗಳ ಮೇಲೆ ಮಲಗಿಕೊಂಡಿದ್ದರು. ಟಿಪ್ಪರ ನಂ. ಟಿ.ಎನ್.48-ಪಿ-0599 ನೇದ ಚಾಲಕನಾದ ತಿರುಪತಿ ಇತನು ಟಿಪ್ಪರಗಳ ಮೇಲೆ ಮಲಗದೆ ಅದರ ಕೆಳಗಡೆ ಅಂದರೆ ಶೇಡ್‌ನ ವರಾಂಡ್‌ದಲ್ಲಿ ಮಲಗಿಕೊಂಡಿದ್ದನು ಎಂದರೆ ಸರಿಯಲ್ಲ. ನಾವು 4 ಜನರು ಶೇಡ್‌ನ ಒಡಗಡೆ ಮಲಗಿಕೊಂಡಿದ್ದೆವು ಎಂದರೆ ಸರಿಯಲ್ಲ. ರಾತ್ರಿ 12-00 ಗಂಟೆಗೆ ಟಪ್ಪರ ನಂ. ಕೆಎ-22-ಬಿ-791 ಮತ್ತು ಕೆಎ-22-ಬಿ-788 ನೇಯವುಗಳು ಕಡಿ ತೆಗೆದುಕೊಂಡು ಖಾಲಿ ಮಾಡಿದ ಬಗ್ಗೆ ಮತ್ತು ದಿಃ 14-12-2009 ರಂದು ಬೆಳಗಿನ ಜಾವ 05-20 ಗಂಟೆಗೆ ಟಪ್ಪರ ನಂ. ಕೆಎ-31-6102 ಮತ್ತು ಕೆಎ-31-5981 ನೇಯವುಗಳ ಸಹ ಕಡಿ ತುಂಬಿಕೊಂಡು ಬಂದು ಖಾಲಿ ಮಾಡಿದ ಬಗ್ಗೆ ನಾನೇ ನಮೂದು ಮಾಡಿ ನಂತರ ಶೇಡನ ಒಳಗಡೆ ಹೋಗಿ ಮಲಗಿಕೊಂಡೆನು ಎಂದರೆ ಸರಿಯಲ್ಲ. ಬೆಳಿಗ್ಗೆ 05-45 ಗಂಟೆಗೆ ಟಪ್ಪರ ನಂ.ಟಿಎನ್.48-ಪಿ 0599 ನೇದು ನಿಲ್ಲಿಸಿಟ್ಟ ಜಾಗೆಯಲ್ಲಿ ಇಲ್ಲದ ಬಗ್ಗೆ ಅದರ ಚಾಲಕ ತಿರುಪತಿ ಇತನು ಬಂದು ನಮ್ಮ ಜೂನಿಯರ್ ಮೆನೇಜರಿಗೆ ಎಬ್ಬಿಸಿ ಹೇಳಿದನು ಎಂದರೆ ಸರಿಯಲ್ಲ. ನಾವು ಮತ್ತು ಟಿಪ್ಪರ ಚಾಲಕರೆಲ್ಲರೂ ಕೂಡಿ ನಮ್ಮ ಪ್ಲಾಂಟನಲ್ಲಿ ಸುತ್ತಮುತ್ತಲು ಮತ್ತು ಜಂಗಲದಲ್ಲಿ ಕೂಡಿ ಹುಡಕಾಡಿದರು ಸಿಗಲಿಲ್ಲ ಸದರಿ ಟಪ್ಪರನ್ನು ಯಾರೋ ಕಳ್ಳರು ಕಳುವು ಮಾಡಿಕೊಂಡು ಒಯ್ದ ಬಗ್ಗೆ ಖಾತ್ರಿಯಾಯಿತು ಎಂದರೆ ಸರಿಯಲ್ಲ. ಸದರ ಟಿಪ್ಪರನ ಬಗ್ಗೆ ಎಲ್ಲಾ ಕಡೆ ಹುಡುಕಾಡಿ ನಮ್ಮ ಕಂಪನಿಯ ಮಾಲೀಕರಿಗೆ ತಿಳಿಸಿ ಬಂದು ನಮ್ಮ ಕಂಪನಿಯ ಜೂನಿಯರ್ ಮೆನೇಜರ ಚಾಸಾ 1 ರವರು ಪೋಲಿಸ ಠಾಣೆಗೆ ಹೋಗಿ ಫಿರ್ಯಾದಿ ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಪಿ 5 ಎಂದು ಗುರುತಿಸಲಾಯಿತು.

ನಾನು ದಿಃ 15-12-2009 ರಂದು ಪೋಲಿಸರು ಜಪ್ತ ಮಾಡಿದ ಟಿಪ್ಪರ ನಂ.ಟಿಎನ್-48-ಪಿ-0599 ನೇದನ್ನು ಹಾಗೂ ಎರಡು ಟಾಯರಗಳನ್ನು ಮತ್ತು ದಸ್ತಗೀರಿ ಆಗಿ ತಮ್ಮ ವಶದಲ್ಲಿದ್ದ ಆರೋಪಿತನನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಸದರ ಟಿಪ್ಪರ ದಿಃ 14-12-2009 ರಂದು ಬೆಳಗಿನ ಜಾವ 03-00 ಗಂಟೆಯ ಸಮಯಕ್ಕೆ ಇದೇ ಆರೋಪಿತನು ಕಳುವು ಮಾಡಿದ ಒಯ್ದು ಕಾಮತಗಾ ಜಂಗಲದಲ್ಲಿ ಇಟ್ಟು ಜಾಕ್ ಹಚ್ಚಿ ತೆಗೆದ ಎರಡು ಟಾಯರಗಳನ್ನು ಅದೇ ಜಂಗಲದಲ್ಲಿ ಇನ್ನೊಂದು ಕಡೆ ಬಚ್ಚಿಟ್ಟ ಬಗ್ಗೆ

ಈಗ ಗೊತ್ತಾಯಿತು ಎಂದು ನನ್ನ ಮರು ಹೇಳಿಕೆಯಲ್ಲಿ ಹೇಳಿಕೆಯನ್ನು ನೀಡಿದ್ದೆನೆ ಎಂದರೆ ಸರಿಯಲ್ಲ. ಆರೋಪಿತನ ಹೆಸರು ಜ್ಞಾನೇಶವರ ತಂದೆ ಪಾಂಡುರಂಗ ಹತ್ತಳಗೆ ಅಂತಾ ಈಗ ಹೇಳಿದರ ಮೇಲಿಂದ ಗೊತ್ತಾಯಿತು ಎಂದು ಮರುಹೇಳಿಕೆಯಲ್ಲಿ ಹೇಳಿಕೆಯನ್ನು ನೀಡಿದ್ದೆನೆ ಎಂದರೆ ಸರಿಯಲ್ಲ. ಮತ್ತು ಸದರ ಪ್ಲಾಟ ನಂ.38 ಸರ್ವೆ ನಂ. 58J19+22 ನೇದರು ಇರುತ್ತದೆ ಎಂದು ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಮರು ಹೇಳಿಕೆಯನ್ನು ಮೂಲ ಹೇಳಿಕೆಗೆ ಸೆರ್ಪಡೆ ಮಾಡಲು ವಿನಂತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ತೆಲಗು ಬಾಷೆಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ಅನುವಾದ ಮಾಡಿದ್ದನ್ನು ನನ್ನ ಹೇಳಿಕೆಯಂತೆ ಇರುತ್ತದೆ ಎಂದರೆ ಸರಿಯಲ್ಲ. ಈ ರೀತಿಯಾಗಿ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ ಸದರಿ ಮರು ಹೇಳಿಕೆಯನ್ನು ನಿರಾಕರಿಸಿದ್ದರಿಂದ ಅದನ್ನು ನಿಪಿ 6 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಷಯ ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರವಾಗಿ ವಕೀಲರಿಂದ.

ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿದ್ದಾರೆ.

ಮರು ವಿಚಾರಣೆಃ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.